(ಇಂದು ದಿನಾಂಕ 13.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ:- ವಾದಿಪರ ವಕೀಲರಿಂದ:-**

ನನ್ನ ಮುಖ್ಯ ವಿಚಾರಣೆಯನ್ನು ಶಪಥ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿನ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಶಪಥ ಪತ್ರದಲ್ಲಿನ ಅಂಶಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನನಗೆ ನೀಡಿರುವ ವಿಶೇಷ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ನಿ.ಪಿ. 1 ಎಂದು, ವಾದಿಗೆ ಪ್ರತಿವಾದಿಗಳು ಬರೆದುಕೊಟ್ಟ ಕ್ರಯದ ಕರಾರನ್ನು ಹಾಜರುಪಡಿಸಿದ್ದು ನಿ.ಪಿ. 2 ಎಂದು, ವಾದಿಯ ಬ್ಯಾಂಕ ಖಾತೆಯ ವಿವರಣೆಯನ್ನು ಹಾಜರುಪಡಿಸಿದ್ದು ನಿ.ಪಿ. 3 ಎಂದು, ನಮೂನೆ 15 ನ್ನು ಹಾಜರುಪಡಿಸಿದ್ದು ನಿ.ಪಿ. 4 ಎಂದು, ಪ್ರತಿವಾದಿಗಳಿಗೆ ದಿನಾಂಕ 08.07.2019 ರಂದು ನೀಡಿದ ನೋಟಿಸನ ಕಚೇರಿಯ ಪತಿಯನ್ನು ಹಾಜರುಪಡಿಸಿದ್ದು ನಿ.ಪಿ. 5 ಎಂದು, ಪ್ರತಿವಾದಿಗಳ ನೀಡಿದ ಪ್ರತ್ಯುತ್ತರ ನೋಟಿಸನ್ನು ಹಾಜರುಪಡಿಸಿದ್ದು ನಿ.ಪಿ. 6 ಎಂದು, ಗುರುತಿಸಲಾಯಿತು.

(ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಿ ಕೇಳಿ ಸರಿ ಇದೆ.**

**2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,**
**ಆನೇಕಲ್.**